ಸಲಾಮವಾಡಿ ಏತ ನೀರಾವರಿ ಯೋಜನೆಗೆ ಹಣ ಬಿಡುಗಡೆ ಬಗ್ಗೆ

1169 (1391): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಲಾಮವಾಡಿ ಏತ ನೀರಾವರಿ ಯೋಜನೆಯನ್ನು ಕಾರ್ಯಗತಗೊಳಿಸಲು ಬೇಕಾಗುವ 24.74 ಲಕ್ಷ ರೂ. ಹಣವನ್ನು ಬಿಡುಗಡೆ ಮಾಡಲು ಹಾಗೂ ಕೆಲಸವನ್ನು ಪ್ರಾರಂಭಿಸಲು ಸರ್ಕಾರವು ಕೈಗೊಂಡ ಕ್ರಮವೇನು ಹಾಗೂ ಈಗ 9 ಲಕ್ಷ ರೂ. ಹಣ ಬಿಡುಗಡೆ ಮಾಡಲಾಗಿದ್ದು, ಇಲ್ಲಿಯವರೆಗೆ ಕೆಲಸವನ್ನು ಪ್ರಾರಂಭ ಮಾಡದಿರಲು ಕಾರಣವೇನು;

ಆ) ದಡ್ಡಿ ಬ್ರಿಡ್ಜ್ ಕಂ ಬಾಂಧಾರ ಕೆಲಸಕ್ಕೆ ಖರ್ಚು ಮಾಡಿದ ಹಣವೆಷ್ಟು, ಹಾಗೂ ಆಯವ್ಯಯದಲ್ಲಿ ನಿಗದಿ ಮಾಡಲಾಗಿರುವ ಹಣವೆಷ್ಟು ? ಈ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಸಲಾಮವಾಡಿ ಏತ ನೀರಾವರಿ ಯೋಜನೆಯ ನಕ್ಷೆ ಮತ್ತು ಅಂದಾಜು ಸರ್ಕಾರದ ಪರಿಶೀಲನೆಯಲ್ಲಿದೆ. ಆಡಳಿತಾತ್ಮಕ ಮತ್ತು ತಾಂತ್ರಿಕ ಒಪ್ಪಿಗೆ ನಂತರ ಪ್ರಾರಂಭಿಸಲಾಗುವುದು.

ಆ) ದಡ್ಡಿ ಬ್ರಿಡ್ಜ್ ಕಂ ಬಾಂಧಾರ ಕೆಲಸಕ್ಕೆ ಯಾವುದೇ ಹಣ ಖರ್ಚು ಮಾಡಿರುವುದಿಲ್ಲ. 92-93ನೇ ಸಾಲಿನ ಇಡುಗಂಟಿನಲ್ಲಿ 16.00 ಲಕ್ಷ ರೂ. ಅನುದಾನವನ್ನು ಒದಗಿಸಲಾಗಿದೆ. ಯೋಜನೆಯು 254 ಎಕರೆ ಅಚ್ಚುಕಟ್ಟು ನೀರಾವರಿಯಾಗುವ ಪ್ರದೇಶದ ಪೈಕಿ 120 ಎಕರೆ ಮಹಾರಾಷ್ಟ್ರ ರಾಜ್ಯದ ವ್ಯಾಪ್ತಿಯಲ್ಲಿ ಬರುವುದು. ಮಹಾರಾಷ್ಟ್ರ ರಾಜ್ಯವನ್ನು ಪ್ರೊರೇಟ್ ವೆಚ್ಚವನ್ನು ಭರಿಸಲು ಕೋರಲಾಗಿದ್ದು ಇದುವರೆಗೆ ಉತ್ತರ ಬಂದಿಲ್ಲ.

ಚಟ್ಟಂಗೆರೆ ಸುರಂಗ ಕಾಲುವೆಯ ಅಕ್ಕಪಕ್ಕದ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ

1171 (1770): ಶ್ರೀ ಡಿ. ಹಲಗೇಗೌಡ (ಪಾಂಡವಪುರ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಾಂಡವಪುರ ಕ್ಷೇತ್ರದ ಶೀಳನೆರೆ ಹೋಬಳಿಯಲ್ಲಿ ಹೇಮಾವತಿ ಎಡದಂಡೆ ನಾಲೆಯ ಬೆಟ್ಟಂಗೆರೆ ಸುರಂಗ ಕಾಲುವೆಯ ಬಳಿ ಅಕ್ಕಪಕ್ಕದ ಗ್ರಾಮಗಳಿಗೆ ಸುರಂಗದ ಆಳದಿಂದಾಗಿ ವ್ಯವಸಾಯ ಮತ್ತು ಕುಡಿಯುವ ನೀರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಾದರೆ, ಇದನ್ನು ಪರಿಹರಿಸಲು ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?

ಇ) ತೊಂದರೆಯಾದ ಗ್ರಾಮಗಳಿಗೆ ಏತ ನೀರಾವರಿ ಯೋಜನೆಗಳಿಂದ ಸಹಾಯ ಮಾಡುವಿರಾ ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಬಂದಿರುತ್ತದೆ.

ಆ) ಏತ ನೀರಾವರಿ ಮೂಲಕ ಪರಿಹರಿಸಲು ಯೋಜಿಸಲಾಗಿದೆ.

ಇ) ಪರಿಶೀಲಿಸಲಾಗುತ್ತಿದೆ.

ಸೇಡಂ ತಾಲ್ಲೂಕಿನ ಕಾಗಿನ ನದಿಗೆ ಏತ ನೀರಾವರಿ ಯೋಜನೆ

1173 (1774): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನ ನದಿಯ ದಂಡೆ ಮೇಲೆ ಏತ ನೀರಾವರಿ ಯೋಜನೆಗಳಾದ ಕುರುಕುಂಟ, ಹೈಹಾಳ, ತೆಲಕೂರು, ಸಮೀಪದಲ್ಲಿ 1992-93ನೇ ಸಾಲಿಗಾಗಿ ಮಂಜೂರಾಗಿದ್ದು ಪ್ರಾರಂಭಿಸುವ ಆದೇಶವನ್ನು ಜಲಸಂಪನ್ಮೂಲ ಮುಖ್ಯ ಅಭಿಯಂತರರು ಆಕ್ಷೇಪಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಜಲಸಂಪನ್ಮೂಲ ಮುಖ್ಯ ಅಭಿಯಂತರರು ಈ ಕಾಗಿನ ನದಿಗೆ ಎರಡು ಸಾವಿರ ಇಸವಿಯ ಒಳಗೆ ಕಾಗಿನ ನೀರಾವರಿ ಯೋಜನೆ ಪೂರ್ಣಗೊಳಿಸುವುದರಿಂದ ಈ ಉದ್ದೇಶಿತ ಏತ ನೀರಾವರಿ ಪ್ರದೇಶ ಈ ಯೋಜನೆಯಲ್ಲಿ ಮುಳುಗಡೆಯಾಗುತ್ತದೆ ಎಂಬ ಆಕ್ಷೇಪಣೆ ನಿಜವೆ;

ಇ) 25-30 ವರ್ಷಗಳಿಂದ ಬರೀ ಊಹಾಪೋಹಗಳಿಂದಲೇ ಈ ಯೋಜನೆ ತಯಾರಾಗುತ್ತಿದೆ. ಆದರೆ ಕಾರ್ಯರೂಪಕ್ಕೆ ತರಲು ಇಲ್ಲಿಯವರೆಗೆ ಯಾವ ಹೆಜ್ಜೆ ಕೈಗೊಳ್ಳದಿರುವ ಈ ಯೋಜನೆ ಇನ್ನೂ 25-30 ವರ್ಷಗಳು ಆದರೂ ಪ್ರಾರಂಭವಾಗಬಹುದೇ;

ಈ) ಈ ಮಂಜೂರಾಗಿರುವ ಏತ ನೀರಾವರಿ ಯೋಜನೆಯ ಗ್ರಾಮಗಳು ಆಂಧ್ರಪ್ರದೇಶದ ಅಕ್ಕಪಕ್ಕದಲ್ಲಿದ್ದು ನೆರೆ ರಾಜ್ಯದಲ್ಲಿ ಇದೇ ಕಾಗಿನ ನದಿಯ ಮೇಲಾಗುವ ಏತ ನೀರಾವರಿ ಯೋಜನೆಗಳನ್ನು ವೀಕ್ಷಿಸಿದರೆ ನಮ್ಮ ಸರ್ಕಾರದ ಈ ವಿಳಂಬ ನೀತಿ ಅನುಸರಿಸುವುದರಿಂದ ನಮ್ಮ ಭಾಗದ ರೈತರಿಗೆ ಕಳವಳ ಉಂಟಾಗುವುದಿಲ್ಲವೆ;

ಉ) ಇಲ್ಲಿಯವರೆಗೆ ಕಾಗಿನ ಯೋಜನೆಗಾಗಿ ಯಾವ ಪೂರ್ವಿಭಾವಿ ಮುನ್ಸೂಚನೆ ಇಲ್ಲದೆ ಯೋಜನೆ ಒಂದು ವೇಳೆ ಆದರೂ ಸಹ ಈ ಏತ ನೀರಾವರಿ ಯೋಜನೆಯನ್ನು ಕೈಗೊಂಡರೆ ಇದಕ್ಕೆ ತಗಲುವ ವೆಚ್ಚ ಈ ಅವಧಿಯಲ್ಲಿಯೇ ಮರುಪಾವತಿಯಾಗುವುದೇ;

ಊ) ಈಗಲಾದರೂ ಸಹ ಮಂಜೂರಾಗಿರುವ ಈ ಯೋಜನೆಗಳನ್ನು ಪ್ರಾರಂಭಿಸಲು ಆದೇಶ ನೀಡಬಹುದೇ ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಹೌದು.

ಆ) ಹೌದು.

ಇ) ಕಾಗಿನ ನೀರಾವರಿ ಯೋಜನೆ ಇನ್ನೂ ಅನ್ವೇಷಣೆ ಹಂತದಲ್ಲಿದೆ. ಈ ಯೋಜನೆಯನ್ನು ಕೈಗೊಂಡು ಕ್ರಿ.ಶ. 2000 ಇಸವಿ ಒಳಗೆ ಪೂರ್ಣಗೊಳಿಸುವ ಉದ್ದೇಶ ಇದೆ. ಈ ಏತ ನೀರಾವರಿ ಯೋಜನೆಗಳು ಕಾಗಿನ ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ, ಇವುಗಳನ್ನು ಕೈಗೊಳ್ಳಬೇಕೆ, ಇಲ್ಲವೇ ಎಂಬ ಬಗ್ಗೆ ಸುದೀರ್ಘವಾಗಿ ಪರಿಶೀಲಿಸಿ ನಂತರ ನಿರ್ಣಯ ತೆಗೆದುಕೊಳ್ಳಲಾಗುವುದು.